ಸೇವೆ ಮಾಡಲು ವೈದ್ಯರು ತಯಾರಿರುವುದಿಲ್ಲ, ಇದು ನಿಜವಾದ ಸಮಸ್ಯೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ವೈದ್ಯರನ್ನು ನಾನು ಎಲ್ಲಿಂದ ಇವರಿಗೆ ತಂದು ಕೊಡಲಿ?

ಅಧ್ಯಕ್ಷರು: ನೀವು ಯಾರಾದರೂ ವೈದ್ಯರನ್ನು ಸಜೆಸ್ಟ್ ಮಾಡಿದರೆ ಅವರನ್ನೆ ನೇಮಕಾತಿ ಮಾಡುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ ಅಷ್ಟೆ.

ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಮಧುಮೇಹ ರೋಗ ನಿಯಂತ್ರಣ.

25(222)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಹೆಚ್ಚುತ್ತಾ ಇರುವ ಮಧುಮೇಹ(ಸಕ್ಕರೆ ಖಾಯಿಲೆ) ರೋಗದ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ವಿಶೇಷ ಯೋಜನೆಯನ್ನೇನಾದರೂ ರೂಪಿಸಿದೆಯೆ?

ಆ) ಪ್ರತಿ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಧುಮೇಹ ರೋಗದ ಬಗೆಗೆ ಪ್ರತ್ಯೇಕ ವಿಭಾಗ ಪ್ರಾರಂಭಿಸಿ ತಜ್ಞರನ್ನು ನಿಯೋಜಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಜಿಲ್ಲಾ ಮಧುಮೇಹ ನಿಯಂತ್ರಣ ಕಾರ್ಯಕ್ರಮವಿರುತ್ತದೆ. ನಗರ ಪ್ರದೇಶಗಳಿಗೆ ವಿಶೇಷವಾದ ಯೋಜನೆಯು ಇರುವುದಿಲ್ಲ.

ಆ) ಈಗಾಗಲೇ ಆಯಾ ಜಿಲ್ಲೆ ಆಸ್ಪತ್ರೆಗಳಲ್ಲಿ ವೈದ್ಯಕೀಯ ವಿಭಾಗದಲ್ಲಿ ಪರಿಣಿತ ವೈದ್ಯರು ಇದ್ದು, ಅವರು ಈ ಕಾಯಿಲೆಯ ಒಟ್ಟಾರೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಪ್ರತ್ಯೇಕ ವಿಭಾಗದ ಅವಶ್ಯಕತೆ ಇರುವುದಿಲ್ಲ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್: ಮಾನ್ಯ ಅಧ್ಯಕ್ಷರೆ, ಈ ಸಕ್ಕರೆ ಖಾಯಿಲೆ ಕೋಟ್ಯಾಂತರ ಜನರಿಗೆ ಹಬ್ಬಿಕೊಂಡಿದೆ, ಇದೂ ಕೂಡ ಅನೇಕ ಖಾಯಿಲೆಗಳ ತಾಯಿ ಇದ್ದಂತೆ, ಹಾಗಾಗಿ ಇದನ್ನು ಆಂಗ್ಲ ಔಷಧಿಯಿಂದ ಇದನ್ನು

ತಡೆಗಟ್ಟಲಾಗುವುದಿಲ್ಲ. ಆದುದರಿಂದ ಈ ರೋಗವನ್ನು ತಡೆಗಟ್ಟಲು ಇಂಡಿಯನ್ ಔಷಧಿಗಳಾದ ಆಯುರ್ವೇದಿಕ್, ಹೋಮಿಯೋಪತಿ ಹಾಗೂ ಯುನಾನಿ ಪದ್ಧತಿಯಲ್ಲಿ ಸಂಶೋಧನೆ ಮಾಡಲು ಸರ್ಕಾರದಲ್ಲಿ ಯಾವುದಾದರೂ ಯೋಜನೆ ಇದೆಯೇ?

ಶ್ರೀಮತಿ ನಫಿಜಾ ಫಜಲ್(ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರ ಪರವಾಗಿ): Diabetes is a genetic problem. We can only bring it under control. We cannot do anything. It is the functioning of the pancreas. ನಮ್ಮ ಟೀಚಿಂಗ್ ಆಸ್ಪತ್ರೆಗಳಲ್ಲಿ, We have introduced the Indian system of Midicine by rotation. We have made arrangements for providing Ayurvedic medicines for two days and Homoeopathic medicines for two days. ಔಷಧಿಗಳ ವ್ಯವಸ್ಥೆಯನ್ನು ಮಾಡಿದ್ದೇವೆ ಮತ್ತೆ ತಪಾಸಣೆ ಮಾಡಲು ಎಲ್ಲಾ ಕಡೆ ಲೆಬೊರಿಸ್ಟ್ರಿಶಿನ್ ಇದ್ದಾರೆ. ಜೆನಿಟಿಕ್ ಸೆಲ್ಯೂಶನ್ ಡಯಾಬಿಟಿಕ್ ಪರೀಕ್ಷೆ ಮಾಡುವುದಕ್ಕೆ ಎಲ್ಲಾ ಕಡೆ ವ್ಯವಸ್ಥೆ ಮಾಡಲಾಗಿದೆ, ಇನ್‌ಸುಲಿನ್ ಚುಚ್ಚು ಮದ್ದು ಎಲ್ಲಾ ಆಸ್ಪತ್ರೆಗಳಲ್ಲೂ ಲಭ್ಯವಿದೆ, Metaformin and some other Diabetic tablets are orally given in all the District Hospitals, in all the Public Health Primary Health Centres and Secondary Health Centres. ಮತ್ತೆ ನಮ್ಮ ಟೀಚಿಂಗ್ ಆಸ್ಪತ್ರೆಯಲ್ಲಿ ಇಂಡಿಯನ್ ಸಿಸ್ಟಂ ಮೆಡಿಸಿನ್ ಅನ್ನು ಪರಿಚಯ ಮಾಡಲಾಗಿದೆ.

ಶ್ರೀ ಹೆಚ್.ಸಿ. ಬಸವರಾಜು: ಗ್ರಾಮಾಂತರ ಪ್ರದೇಶದಲ್ಲಿರುವ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತುರ್ತು ಚಿಕಿತ್ಸೆಗೋಸ್ಕರ ಅಂಬುಲೆನ್ಸ್ ವಾಹನವನ್ನು ಕೊಟ್ಟಿರುವುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಒಂದು ಕಿ.ಮೀ.ಗೆ ಎರಡು ರೂಪಾಯಿಗಳನ್ನು ಚಾರ್ಜ್ ಮಾಡಲಾಗುತ್ತಿತ್ತು, ಅದನ್ನು ದಿಢೀರನೆ ನಾಲ್ಕು ರೂಪಾಯಿಗಳಿಗೆ ಏರಿಸಲಾಗಿದೆ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಬಡವರು ತುರ್ತಾಗಿ ತಾಲ್ಲೂಕು ಮಟ್ಟದಿಂದ ಜಿಲ್ಲಾಮಟ್ಟದ ಆಸ್ಪತ್ರೆಗೆ ಚಿಕಿತ್ಸೆಗೋಸ್ಕರ ಆ ವಾಹನ ತೆಗೆದುಕೊಳ್ಳಲು ಸಾಧ್ಯವಾಗದೆ ಇವತ್ತು ತಾಲ್ಲೂಕು ಮಟ್ಟಗಳಲ್ಲಿ ಸಾಕಷ್ಟು ಜನರು ಸಾಯುತ್ತಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಏತಕ್ಕೆ ಈ ರೀತಿ ಮಾಡಲಾಗಿದೆ?

ಶ್ರೀಮತಿ ನಫಿಜಾ ಫಜಲ್: ಅಧ್ಯಕ್ಷರೆ, ಅದು ಪ್ರತ್ಯೇಕ ಪ್ರಶ್ನೆಯಾಗಿದೆ.